SEVA BHARATHI
सेवा ही परमो धर्मः

ಸಂಚಿಕೆ : 12
ಸಂಪುಟ : 03

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ)
ಮಾಸಿಕ e-ನ್ಯೂಸ್ ಲೆಟರ್ - ಫೆಬ್ರವರಿ 2023

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ-II, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. - 574 216

## ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ
## ಗಾಲಿಕುರ್ಚಿ ಬಾಸ್ಕೆಟ್‌ಬಾಲ್ ತರಬೇತಿ




## ಕರ್ನಾಟಕ ಬ್ಯಾಂಕ್ ಸಿಎಸ್‌ಆರ್ ಅಡಿ ದಿವ್ಯಾಂಗರಿಗಾಗಿ ಗಾಲಿಕುರ್ಚಿಗಳ ವಿತರಣೆ

## ದ.ಕ. ಜಿಲ್ಲಾ ಬೆನ್ನುಹುರಿ ಅಪಘಾತಕ್ಕೊಳಗಾದವರ ಒಕ್ಕೂಟ ರಚನೆ ಹಾಗೂ ಪೂರ್ವಭಾವಿ ಸಭೆ

ಅವಿರೋಧ ಅಧ್ಯಕ್ಷರಾಗಿ ಪ್ರದೀಪ್, ಪುತ್ತೂರು ಹಾಗೂ ಕಾರ್ಯದರ್ಶಿಯಾಗಿ ಮೋಹನ್ ಕೆ. ಆಯ್ಕೆ

## ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರೊಂದಿಗೆ ಸಂವಹನ

ಬೆನ್ನುಹುರಿ ಅಪಘಾತದ ಬಗ್ಗೆ ಮಾಹಿತಿ ಕಾರ್ಯಾಗಾರಗಳು

## ಗಿಫ್ಟ್ ಏಬಲ್ಡ್ ವತಿಯಿಂದ 5 ರ್‍ಯಾಂಪ್ ನಿರ್ಮಾಣಕ್ಕೆ ಧನಸಹಾಯ

## ಜೀವನ ಪಯಣ ಕಠಿಣವಾದಾಗ ನೆರವಿಗೆ ಬಂದ ದೂರ ಶಿಕ್ಷಣ

ನಿತೇಶ್ ನಾಯ್ಕ್ ಜೀವನಸ್ಫೂರ್ತಿ ಕಥೆ

## ನಮ್ಮಿಂದಿಷ್ಟು

ಫೆಬ್ರವರಿ ಮತ್ತು ಮಾರ್ಚ್ ತಿಂಗಳು ಎಲ್ಲಾ ಎನ್.ಜಿ.ಓ.ಗಳಿಗೆ ಬಿಡುವು ರಹಿತ ಮಾಸಗಳಾಗಿವೆ. ಮುಂದಿನ ವರ್ಷಕ್ಕೆ ಪ್ಲಾನ್ಸ್ ಮತ್ತು ಬಜೆಟ್ ಮಾಡುವುದು, ಈ ವರ್ಷದ ಟಾರ್ಗೆಟ್ ಬಾಕಿಯಾಗಿದ್ದಲ್ಲಿ ಪೂರೈಸುವುದು, ಧನ ಕ್ರೂಢೀಕರಣಕ್ಕಾಗಿ ಯೋಜಿಸುವುದು, ಕಾರ್ಯಕ್ಷೇತ್ರದ ವಿಸ್ತಾರ.... ಹೀಗೆ ಹತ್ತು ಹಲವು.

ಅಂತಹುದೇ ಒಂದು ನಮ್ಮ ಸಂಸ್ಥೆಯಲ್ಲಿ 3 ವರ್ಷಗಳಿಗೊಮ್ಮೆ ಆಗಬೇಕಾಗದ ಆಡಳಿತ ಮಂಡಳಿಯ ಪುನರ್ರಚನೆ ಫೆಬ್ರವರಿಯ ಈ ತಿಂಗಳಿನಲ್ಲಿ ನಡೆದಿದೆ. ಈ ಸಂಸ್ಥೆಯ ನೊಗ ಹೊರುವಂತಹ ಗುರುತರ ಜವಾಬ್ದಾರಿ ಮಹಿಳೆಗೆ ದೊರಕಿದೆ ಎಂಬುದು ಉಲ್ಲೇಖನೀಯ ಸಂಗತಿಯಾಗಿದೆ. ಇಂತಹುದು ಮೊದಲೊಮ್ಮೆ ನಡೆದಿತ್ತು. ಒಟ್ಟಿನಲ್ಲಿ ಸಂಘಟಿತ ಶಕ್ತಿಗೆ ಮಹತ್ವವಿದೆ. ಪ್ರತಿಯೊಬ್ಬ ಕಾರ್ಯಕಾರಿ ಸದಸ್ಯನೂ ಪರಿಶ್ರಮ ವಹಿಸಬೇಕಾಗಿರುವುದು ಈ ಸಮಾಜದ ಬಲಗೊಳ್ಳುವಿಕೆಗೆ.... ಅದಕ್ಕಾಗಿ ಇಂತಹ ಸೇವೆಗಳು. ಅದೂ ತಾಯಿ ಭಾರತೀಯ ಸೇವೆಗಾಗಿ ಸಮರ್ಪಿತ ಸಂಘಟನೆಯಾಗಿ ಸೇವಾಭಾರತಿ.

**Ace Manufacturing Systems** ಎಂಬ ಕಂಪೆನಿ ಕಳೆದ 4 ವರ್ಷಗಳಿಂದ ನಮ್ಮ ಬೆನ್ನೆಲುಬಾಗಿ ನಿಂತಿರುವುದು ಸೌಭಾಗ್ಯ ಮತ್ತು ಶ್ಲಾಘನೀಯ. ಅದರಂತೆ **Chem Trend Chemicals Pvt. Ltd.** ಸಹಕಾರ ನಮ್ಮ ಸೇವಾಪಥ ನಡಿಗೆಯನ್ನು ಸುಲಭಗೊಳಿಸಿದೆ. ಪ್ರತಿವರ್ಷ ಕೊಡುಗೈದಾನಿಗಳು, ಸಹೋದರರೂ ಆದ ಪಿ.ಬಿ.ರಾವ್, ಪಿ.ಎನ್.ರಾವ್‌ರವರಿಗೆ ನಾವು ಋಣಿಗಳು.

ಈ ವರ್ಷಗಳಲ್ಲಿ ಸಂಸ್ಥೆ ಅದ್ಭುತವಾಗಿ ಬೆಳೆಯಲು ಕಾರಣೀಕರ್ತರಾದ ಅನೇಕ ಸಂಸ್ಥೆಗಳನ್ನು, ಕೊಡುಗೈದಾನಿಗಳನ್ನು, ನಮ್ಮೊಂದಿಗೆ ಹೆಗಲುಕೊಟ್ಟು ಸಹಕರಿಸಿದ ಕಾರ್ಯಕಾರಿ ಸದಸ್ಯರುಗಳನ್ನು, ಸಲಹಾಮಂಡಳಿ ಸದಸ್ಯರನ್ನು, ನಿರ್ದೇಶಕರುಗಳನ್ನು ಮತ್ತು ಪರಿಶ್ರಮ ವಹಿಸುತ್ತಿರುವ ಸಿಬ್ಬಂದಿವರ್ಗಕ್ಕೂ ನಾನು ಅಭಿವಂದಿಸುತ್ತಿದ್ದೇನೆ. ಹಾಗೂ ನಾನು ಎಲ್ಲರಿಗೂ ಅಭಾರಿಯಾಗಿರುವೆ.

ಪಿತೃ ಸಮಾನರಾದ ಸೇವಾಧಾಮದ ಸಂಚಾಲಕರಾದ ಕೆ.ಪುರಂದರ ರಾವ್‌ರವರು ಸಂಸ್ಥೆ ಬೆಳೆಯಲು ಮುಖ್ಯ ಕಾರಣೀಕರ್ತರಾಗಿರುವುದಲ್ಲದೆ ನನ್ನೆಲ್ಲ ಶಕ್ತಿಯ ಹಿಂದಿರುವ ಮುತ್ಸದ್ಧಿ ಎಂಬುದು ಸೂರ್ಯನಷ್ಟೇ ಸತ್ಯ ವಿಚಾರವಾಗಿದೆ. ಅವರಿಗೂ ಕೃತಜ್ಞನಾಗಿದ್ದೇನೆ.

ತಾವೆಲ್ಲರೂ ಹೊಸ ಮಂಡಳಿಗೂ ಇದೇ ರೀತಿಯ ಸಹಕಾರ ನೀಡಬೇಕೆಂಬುದು ನನ್ನ ಅಪೇಕ್ಷೆ. ಸೇವ್ಯ ಸೇವಕ ಭಾವಕ ಮುಂದುವರೆಯಲಿ ಎಂದು ಆಶಿಸುತ್ತಾ, ತಾಯಿ ಭಾರತಿಗೆ ಜಯಕಾರ ಸಲ್ಲಿಸುತ್ತಾ, ಸೇವೆಯಲ್ಲಿ ಹೆಜ್ಜೆ ಹಜ್ಜೆಯಿಟ್ಟು ಮುಂದುವರಿಯೋಣ....

ಇತೀ ತಮ್ಮವ,

**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಜಿಲ್ಲಾ ಕಚೇರಿ :**

ಸೇವಾನಿಕೇತನ
ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿ
ಹೆರ್ಗ, ಉಡುಪಿ ತಾಲೂಕು – 576 107
ಮೊ.: 9606044893

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)

ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ | – ಟ್ರಸ್ಟಿ |
| ಶ್ರೀ ವಿಷ್ಣು ಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |

## ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಶ್ರೀಮತಿ ಮನೋರಮ ಭಟ್
3. ಶ್ರೀ ಉದಯಶಂಕರ್
4. ಶ್ರೀ ಹರೀಶ್ ಟಿ. ಪಿ.
5. ಶ್ರೀ ಗೋಪಾಲ ಕೆ. ವಿ.
6. ಶ್ರೀಮತಿ ಜೊಯ್ಸ್ ಪಿರೇರಾ
7. ಶ್ರೀ ರಜತ್‌ರಾವ್, ಧರ್ಮಸ್ಥಳ
8. ಶ್ರೀ ವಿಜಯ ಕೊಡವೂರು

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

# ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಗಾಲಿಕುರ್ಚಿ ಬಾಸ್ಕೆಟ್‌ಬಾಲ್ ತರಬೇತಿ ಕಾರ್ಯಾಗಾರ




**ಉಜಿರೆ:** ಸೇವಾಭಾರತಿ–ಸೇವಾಧಾಮದ ವತಿಯಿಂದ ಎಸ್.ಡಿ.ಎಂ. ತಾಂತ್ರಿಕ ವಿದ್ಯಾಲಯದಲ್ಲಿ ಬೆನ್ನುಹುರಿ ಅಪಘಾತ ಕ್ಕೊಳಗಾದ ದಿವ್ಯಾಂಗರಿಗೆ ಗಾಲಿಕುರ್ಚಿ ಬಾಸ್ಕೆಟ್‌ಬಾಲ್ ತರಬೇತಿ ಕಾರ್ಯಗಾರವನ್ನು ಫೆಬ್ರವರಿ 26 ರಂದು ನಡೆಸಲಾಯಿತು.

ಕಾರ್ಯಕ್ರಮವನ್ನು ಎಸ್.ಡಿ.ಎಂ.ಕಾಲೇಜು ಪ್ರಾಂಶುಪಾಲ ರಾದ ಡಾ. ಎ.ಜಯಕುಮಾರ್ ಶೆಟ್ಟಿ ಉದ್ಘಾಟಿಸಿ, ಸೇವಾಭಾರತಿಯ ಸೇವಾಕಾರ್ಯಕ್ರಮಗಳು ಹಾಗೂ ಇಂತಹ ಕ್ರೀಡಾ ಚಟುವಟಿಕೆಗಳಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು ಭಾಗವಹಿಸುವುದರ ಮೂಲಕ ಸಮಾಜಕ್ಕೆ ಒಳ್ಳೆಯ ಸಂದೇಶ ಹಾಗೂ ಇತರಿರ ಬದುಕಿಗೂ ಸ್ಫೂರ್ತಿಯಾಗುತ್ತದೆ ಎಂದು ಅಭಿವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸೇವಾಭಾರತಿಯ ಅಧ್ಯಕ್ಷರಾದ ಶ್ರೀಮತಿ ಸ್ವರ್ಣಗೌರಿ ಶಿಬಿರಾರ್ಥಿಗಳಿಗೆ ಶುಭ ಹಾರೈಸಿದರು. ಮುಖ್ಯ ಅತಿಥಿಗಳಾಗಿ ಭಾರತೀಯ ಮಹಿಳಾ ತಂಡದ ತರಬೇತುದಾರ ಮತ್ತು ವೀಲ್‌ಚೇರ್ ಬಾಸ್ಕೆಟ್‌ಬಾಲ್ ಫೆಡರೇಶನ್ ಆಫ್ ಇಂಡಿಯಾ ಇದರ ಪ್ರಧಾನ ಕಾರ್ಯದರ್ಶಿಯಾದ ಲೀಸ್ಸೈಮನ್, ರೋಟರಿಕ್ಲಬ್ ಬೆಳ್ತಂಗಡಿಯ ಅಧ್ಯಕ್ಷರಾದ ಶ್ರೀಮತಿ ಮನೋರಮ ಭಟ್, ಅನ್ನಪೂರ್ಣ ಮೆಡಿಕಲ್ ಹಾಗೂ ಜನರಲ್ ಸ್ಟೋರ್‌ನ ಮಾಲೀಕರಾದ ಶ್ರೀ ರಜತ್ ರಾವ್ ಹಾಗೂ ಸೇವಾಭಾರತಿಯ ಕಾರ್ಯದರ್ಶಿಯಾದ ಬಾಲಕೃಷ್ಣ ಅವರು ಉಪಸ್ಥಿತರಿದ್ದರು.

ಭಾರತೀಯ ಮಹಿಳಾ ತಂಡದ ತರಬೇತುದಾರ ಮತ್ತು ವೀಲ್‌ಚೇರ್ ಬಾಸ್ಕೆಟ್‌ಬಾಲ್ ಫೆಡರೇಶನ್ ಆಫ್ ಇಂಡಿಯಾ ಇದರ ಪ್ರಧಾನಕಾರ್ಯದರ್ಶಿ ಲೀಸ್ಸೈಮನ್‌ರವರನ್ನು ಸಂಸ್ಥೆಯ ಪರವಾಗಿ ಗೌರವಿಸಲಾಯಿತು. ಕಾರ್ಯಕ್ರಮವನ್ನು ಚರಣ್‌ಕುಮಾರ್‌ರವರು ನಿರೂಪಿಸಿ, ಮೋಹನ್ ಸ್ವಾಗತಿಸಿ, ಅಖಿಲೇಶ್ ಧನ್ಯವಾದವಿತ್ತರು.

ಉದ್ಘಾಟನಾ ಕಾರ್ಯಕ್ರಮದ ನಂತರ ಶ್ರೀ ಲೀಸ್ಸೈಮನ್‌ರವರು ಸಂಜೆ 4 ಗಂಟೆಯವರೆಗೆ ತರಬೇತಿ ನಡೆಸಿದರು. ಎಸ್.ಡಿ.ಎಂ. ಎಜುಕೇಶನಲ್ ಸೊಸೈಟಿ ಉಜಿರೆ, ಅಸೋಸಿಯೇಶನ್ ಆಫ್ ಪೀಪಲ್ಸ್ ವಿಥ್ ಡಿಸೆಬಿಲಿಟಿ ಬೆಂಗಳೂರು, ಅನ್ನಪೂರ್ಣ ಮೆಡಿಕಲ್ ಮತ್ತು ಜನರಲ್ ಸ್ಟೋರ್ ಧರ್ಮಸ್ಥಳ, ಕರ್ನಾಟಕ ವೀಲ್‌ಚೇರ್–ಬಾಸ್ಕೆಟ್‌ಬಾಲ್ ಸೋಸಿಯೇಷನ್, ತುಳುಶಿವಳ್ಳಿ ಸಭಾ ಬೆಳ್ತಂಗಡಿ, ಕಾಲಿಬೆರ್ ಪ್ರೈವೇಟ್ ಇಂಡಿಯಾ ಬೆಂಗಳೂರು, ಬೊಗನ್ ರೆಸಿಡೆನ್ಸಿ ಕನ್ಯಾಡಿ ಇವರುಗಳು ತರಬೇತಿ ಕಾರ್ಯಾಗಾರವನ್ನು ಯಶಸ್ವಿಗೊಳಿಸಲು ಸಂಸ್ಥೆಯೊಂದಿಗೆ ಕೈಜೋಡಿಸಿದ್ದಾರೆ.

## ದಾನಿಗಳು

### ಕರ್ನಾಟಕ ಬ್ಯಾಂಕ್ ಸಿಎಸ್‌ಆರ್ ಅಡಿ ದಿವ್ಯಾಂಗರಿಗಾಗಿ ಗಾಲಿಕುರ್ಚಿಗಳ ವಿತರಣೆ




**ಕನ್ಯಾಡಿ:** ಫೆ. 05 ರಂದು ಸೇವಾಭಾರತಿಯ ಅಂಗಸಂಸ್ಥೆಯಾದ ಸೇವಾಧಾಮದಿಂದ ಗುರುತಿಸಲ್ಪಟ್ಟ 5 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಗಾಲಿಕುರ್ಚಿ ವಿತರಣಾ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಕರ್ನಾಟಕ ಬ್ಯಾಂಕಿನ ಮ್ಯಾನೆಜಿಂಗ್ ಡೈರೆಕ್ಟರ್ ಹಾಗೂ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಮಹಾಬಲೇಶ್ವರ ಎಂ. ಎಸ್. ಗಾಲಿಕುರ್ಚಿಗಳನ್ನು ಹಸ್ತಾಂತರಿಸಿ, ಸೇವಾಭಾರತಿಯು ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಸಮುದಾಯ ಹಾಗೂ ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಮಾಡುವ ನಿರಂತರ ಸೇವೆಯನ್ನು ಶ್ಲಾಘಿಸಿದರು. 100ನೇ ವರ್ಷದ ಸಂಭ್ರಮಾಚರಣೆಯಲ್ಲಿರುವ ಕರ್ನಾಟಕ ಬ್ಯಾಂಕ್, ಸಮಾಜದ ಕೊರತೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ 1924 ರಿಂದಲೂ ಮಾನವೀಯತೆಯ ಸ್ಪರ್ಶದೊಂದಿಗೆ ಸಮಾಜಸೇವಾ ಕಾರ್ಯಗಳಿಗೆ ಹೆಚ್ಚು ಆದ್ಯತೆ ನೀಡುತ್ತಾ ಬಂದಿರುತ್ತದೆ ಎಂದರು. ಸೇವಾಭಾರತಿಯು ಅರ್ಥಪೂರ್ಣ ಕಾರ್ಯಕ್ರಮಗಳಿಗೆ ಮುಂದಿನ ದಿನಗಳಲ್ಲಿ ಸಹಕರಿಸುವ ಭರವಸೆ ನೀಡಿ, ಫಲಾನುಭವಿಗಳಿಗೆ ವಿಶ್ವಾಸ ಬದುಕಿಗಾಗಿ ಧೈರ್ಯ ತುಂಬಿದರು.

ಧರ್ಮಸ್ಥಳ ಸಿರಿಗ್ರಾಮೋದ್ಯೋಗ ಸಂಸ್ಥೆಯ ಮ್ಯಾನೆಜಿಂಗ್ ಡೈರೆಕ್ಟರ್ ಕೆ.ಎನ್.ಜನಾರ್ದನರವರು ಸೇವಾಭಾರತಿಯಿಂದ ನೀಡಿದ ನೀರಿನ ಹಾಸಿಗೆಗೆ ಧನಸಹಾಯದ ಚೆಕ್ಕನ್ನು ಫಲಾನುಭವಿಗೆ ಹಸ್ತಾಂತರಿಸಿ, ಸೇವಾಭಾರತಿ ಸಂಸ್ಥೆಯು ದಿವ್ಯಾಂಗರ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅಪಾರ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು ಇಂತಹ ಸಂಸ್ಥೆಯ ಪ್ರಯೋಜನ ಪಡೆದು ಸಮಾಜದಲ್ಲಿ ಸ್ವಾವಲಂಬಿ ಜೀವನ ನಡೆಸುವಲ್ಲಿ ಸಫಲರಾಗಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ಬ್ಯಾಂಕ್ ಶಾಖಾ ಪ್ರಬಂಧಕರುಗಳಾದ ವಿನಾಯಕ ಪ್ರಭು, ಪ್ರವೀಣ್, ಪದ್ಮಪ್ರಸಾದ್ ಆಳ್ವ, ಅವಿನಾಶ್ ಕೆ. ಹಾಗೂ ಸೇವಾಧಾಮದ ಸಂಚಾಲಕರಾದ ಪುರಂದರ ರಾವ್, ಸಂಸ್ಥೆಯಅಧ್ಯಕ್ಷರಾದ ಕೆ.ವಿನಾಯಕ ರಾವ್ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಸಂಸ್ಥೆಯ ಸೀನಿಯರ್ ಮ್ಯಾನೇಜರ್ ಚರಣ್ ಕುಮಾರ್ ಇವರು ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಕೆ.ಪುರಂದರ ರಾವ್ ಧನ್ಯವಾದವಿತ್ತರು.

### ಫೆಬ್ರವರಿ ತಿಂಗಳಿನಲ್ಲಿ ದೇಣಿಗೆ ನೀಡಿದ ಸಂಘ ಸಂಸ್ಥೆಗಳು

1. ಅಸೋಸಿಯೇಶನ್ ಆಫ್ ಪೀಪಲ್ ವಿಥ್ ಡಿಸೆಬಿಲಿಟಿ (ಎಪಿಡಿ) ಬೆಂಗಳೂರು
2. ಗಿವ್ ಫೌಂಡೇಷನ್, ಬೆಂಗಳೂರು

### ಮಹನೀಯ ದಾನಿಗಳು

1. ಕು. ತ್ರಿವೇಣಿ, ಬೆಂಗಳೂರು
2. ಶ್ರೀ ಕುಶಲ್ ಜಿ. ಕೆ, ಬೆಂಗಳೂರು
3. ಶ್ರೀ ಪಣಂಬೂರು ಬಾಲಕೃಷ್ಣ ರಾವ್, ಬೆಂಗಳೂರು
4. ಶ್ರೀಮತಿ ವಿದ್ಯಾ ಪಿ.
5. ಶ್ರೀ ಪಣಂಬೂರು ನಾಗೇಶ್‌ರಾವ್, ಮುಂಬೈ
6. ಕು। ಹನ್ವಿಕ, ಹೆಬ್ರಿ
7. ಶ್ರೀ ವೈಭವ್ ವಿ. ರಾವ್ ಮುಂಬೈ
8. ಶ್ರೀಮತಿ ಪದ್ಮಾವತಿ ಮತ್ತು ಕುಟುಂಬ, ಕನ್ಯಾಡಿ
9. ಕು। ನಿಧಿಷ, ಪುತ್ತೂರು
10. ಶ್ರೀಮತಿ ಅನ್ನಪೂರ್ಣ, ಚಿಕ್ಕಮಗಳೂರು
11. ಶ್ರೀ ಉಮಾಕಾಂತ್ ಎನ್.ಡಿ.

### ಸೇವಾನಿಧಿ ದಾನಿಗಳು

1. ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ
2. ಶ್ರೀ ಲಕ್ಷ್ಮಿನಾರಾಯಣ ರಾವ್, ಧರ್ಮಸ್ಥಳ
3. ಶ್ರೀ ಮಧ್ವಮೂರ್ತಿ, ಉಡುಪಿ
4. ಶ್ರೀ ಗುರುರಾಜ್, ಕನ್ಯಾಡಿ
5. ಶ್ರೀ ಕಾರ್ತಿಕ್ ಕೆ, ಧರ್ಮಸ್ಥಳ
6. ಶ್ರೀಮತಿ ಬಬಿತ, ಕನ್ಯಾಡಿ
7. ಶ್ರೀ ಪುರುಷೋತ್ತಮ ಡಿ.ಎ, ಧರ್ಮಸ್ಥಳ
8. ಶ್ರೀಮತಿ ಶಾಂತ ಕುಮಾರಿ, ಬೆಳಾಲು
9. ಶ್ರೀ ಮಧುಸೂದನ್, ಉಜಿರೆ
10. ಶ್ರೀ ಡಿ.ಎನ್.ಗಿರೀಶ್, ಧರ್ಮಸ್ಥಳ
11. ಶ್ರೀ ಚೈತ್ರೇಶ್ ಶೆಟ್ಟಿ, ಉಜಿರೆ
12. ಶ್ರೀ ಬಿ. ರಾಮ್‌ದಾಸ್ ಭಂಡಾರ್ಕರ್

# ದ.ಕ. ಜಿಲ್ಲಾ ಬೆನ್ನುಹುರಿ ಅಪಘಾತಕ್ಕೊಳಗಾದವರ ಒಕ್ಕೂಟ ರಚನೆ ಹಾಗೂ ಪೂರ್ವಭಾವಿ ಸಭೆ

## ಅವಿರೋಧ ಅಧ್ಯಕ್ಷರಾಗಿ ಪ್ರದೀಪ್, ಪುತ್ತೂರು ಹಾಗೂ ಕಾರ್ಯದರ್ಶಿಯಾಗಿ ಮೋಹನ್ ಕೆ. ಆಯ್ಕೆ



**ಬಂಟ್ವಾಳ :** ದಕ್ಷಿಣಕನ್ನಡ ಜಿಲ್ಲೆಯ ಸೇವಾಭಾರತಿ – ಸೇವಾಧಾಮ ಇದರ ಆಶ್ರಯದಲ್ಲಿ ಬೆಂಗಳೂರಿನ ಅಸೋಸಿಯೇಷನ್ ಆಫ್ ಪೀಪಲ್ ವಿಥ್ ಡಿಸೆಬಿಲಿಟಿ (ಎ.ಪಿ.ಡಿ) ಇದರ ಸಹಯೋಗ ದೊಂದಿಗೆ ದಕ್ಷಿಣಕನ್ನಡ ಜಿಲ್ಲಾ ಬೆನ್ನುಹುರಿ ಅಪಘಾತಕ್ಕೊಳಗಾದವರ ಒಕ್ಕೂಟ ರಚನೆ ಹಾಗೂ ಪೂರ್ವಭಾವಿ ಸಭೆ ಫೆಬ್ರವರಿ 09 ರಂದು ಸಂಘ ಕಾರ್ಯಾಲಯ, ಕುಲಾಲ ಭವನ ರಸ್ತೆ, ಬಿ.ಸಿ.ರೋಡ್ ಸರ್ಕಲ್ ಬಳಿ ನಡೆಯಿತು.

ಬೆಂಗಳೂರಿನ ಎ.ಪಿ.ಡಿ ಸಂಸ್ಥೆಯ ನೀತಿ ಮತ್ತು ವಕಾಲತ್ತು ವಿಭಾಗದ ಉಪನಿರ್ದೇಶಕರಾದ ಬಾಬು ಎಸ್. ಖಾನ್‌ರವರು ಬೆನ್ನುಹುರಿ ಅಪಘಾತಕ್ಕೊಳಗಾದವರ ಒಕ್ಕೂಟ ರಚನೆಯ ಮಹತ್ವ, ಪ್ರಾಮುಖ್ಯತೆ, ಪ್ರಕ್ರಿಯೆ, ಹಾಗೂ ಒಕ್ಕೂಟವು ಸರ್ಕಾರದಿಂದ ಸಿಗಬೇಕಾದ ಸೌಲಭ್ಯಗಳ ಯೋಜನೆ ರೂಪಿಸುವ ಬಗ್ಗೆ ಮಾಹಿತಿ ನೀಡಿದರು. ಬೆಳಗಾವಿ ಎ.ಪಿ.ಡಿ. ಸಂಸ್ಥೆಯ ಕಾರ್ಯತಂತ್ರ ಸಂಯೋಜಕ ರಾದ ಚೆನ್ನಪ್ಪ ಎನ್. ಕುಂಬಾರ ಬೆನ್ನುಹುರಿ ಅಪಘಾತಕ್ಕೊಳಗಾದವರ ಒಕ್ಕೂಟ ರಚನೆಯ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿದರು.

ದ.ಕಜಿಲ್ಲಾ ಬೆನ್ನುಹುರಿ ಅಪಘಾತಕ್ಕೊಳಗಾದವರ ಒಕ್ಕೂಟದ ಅಧ್ಯಕ್ಷರಾಗಿ ಪ್ರದೀಪ್, ಪುತ್ತೂರು, ಉಪಾಧ್ಯಕ್ಷರಾಗಿ ಆಶ್ರಫ್ ಲಾಯಿಲ, ಕಾರ್ಯದರ್ಶಿಯಾಗಿ ಮೋಹನ್ ಕೆ. ಅರಿಯಡ್ಕ, ಖಜಾಂಚಿಯಾಗಿ ಶೇಖರ್ ಬೈಪಾಡಿ, ಮುಖ್ಯಸಲಹೆಗಾರರಾಗಿ ಡಾ. ಮುರಳಿಧರ್ ನಾಯಕ್ ಅವಿರೋಧವಾಗಿ ಇವರುಗಳು ಆಯ್ಕೆಯಾಗಿದ್ದಾರೆ.

# ಬೆನ್ನುಹುರಿ ಅಪಘಾತದ ಬಗ್ಗೆ ಮಾಹಿತಿ ಕಾರ್ಯಗಾರ




**ಉಜಿರೆ:** ಸೇವಾಭಾರತಿ – ಸೇವಾಧಾಮದ ವತಿಯಿಂದ ಎಸ್. ಡಿ. ಎಮ್. ಕಾಲೇಜು ಉಜಿರೆಯ ಸಮಾಜಕಾರ್ಯ ವಿಭಾಗದ ಪ್ರಥಮ ಹಾಗೂ ದ್ವೀತೀಯ ವರ್ಷದ ವಿದ್ಯಾರ್ಥಿಗಳಿಗೆ ಬೆನ್ನುಹುರಿ ಅಪಘಾತ ಮತ್ತು ದ್ವಿತೀಯಾಂತರ ಸಮಸ್ಯೆಗಳ ಬಗ್ಗೆ ಕಾರ್ಯಗಾರವನ್ನು ಫೆಬ್ರವರಿ 20 ರಂದು ನಡೆಸಲಾಯಿತು.

ಸೇವಾಭಾರತಿಯ ಖಜಾಂಚಿಯಾದ ಶ್ರೀ ಕೆ.ವಿನಾಯಕರಾವ್ ರವರು ಬೆನ್ನುಹುರಿ ಅಪಘಾತ ಮತ್ತು ದ್ವಿತೀಯಾಂತರ ಸಮಸ್ಯೆಗಳ ಬಗ್ಗೆ ಮಾಹಿತಿಯಿತ್ತರು.

ಈ ಸಂಧರ್ಭದಲ್ಲಿ ಸಮಾಜಕಾರ್ಯ ವಿಭಾಗದ ಮುಖ್ಯಸ್ಥರಾದ ಡಾ. ರವಿಶಂಕರ್ ಕೆ.ಆರ್, ಸಹಾಯಕ ಪ್ರಧ್ಯಾಪಕರುಗಳಾದ ಡಾ. ಅತುಲ್ ಸೆಮಿತ್, ಡಾ. ಧನೇಶ್ವರಿ, ಸ್ವಾತಿ ಬಿ. ಹಾಗೂ ಸೇವಾಭಾರತಿ ದಕ್ಷಿಣಕನ್ನಡ ಜಿಲ್ಲೆಯ ಕ್ಷೇತ್ರ ಸಂಯೋಜಕರಾದ ಅಖಿಲೇಶ್, ಡಾಕ್ಯುಮೆಂಟ್ ಸಂಯೋಜಕಿಯಾದ ಅಪೂರ್ವ ಪಿ.ವಿ. ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಾರ್ಯಗಾರದಲ್ಲಿ ಒಟ್ಟು 81 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕು. ಪ್ರತೀಕ್ಷಾ ಕಾರ್ಯಕ್ರಮ ನಿರೂಪಿಸಿ, ವಿಶಾಲಾಕ್ಷಿ ಸ್ವಾಗತಿಸಿ ಕು। ಶಬರಿ ಧನ್ಯವಾದವಿತ್ತರು.

# ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರೊಂದಿಗೆ ಸಂವಹನ



**ಮುಂಬೈ:** ಸಂಸ್ಥೆಯ ಖಜಾಂಚಿ ಕೆ. ವಿನಾಯಕ ರಾವ್ ರವರು ಮುಂಬೈಗೆ ಪ್ರಯಾಣ ಮಾಡುವ ಸಂದರ್ಭದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರನ್ನು ಭೇಟಿ ಮಾಡಿದರು. ದಾವಣಗೆರೆಯ ಕು. ಕಲಾವತಿ, ರಾಣೆಬೆನ್ನೂರಿನ ಶ್ರೀನಾಥ್ ಬಾನುವಳ್ಳಿ, ಪೂನಾದ ಶ್ರೀಮತಿ ಡಯನಾ ರೋಡ್ರಿಗಸ್ ಹಾಗೂ ಮುಂಬೈನ್ ಹರ್ಷಲ್ ಶಿಂದೆ, ಸಿರಸಿಯ ಗಣೇಶ್ ಹೆಗ್ಡೆ ಅವರೊಂದಿಗೆ ಮಾತನಾಡಿದರು.

ರಾಣಿಬೆನ್ನೂರಿನ ಓಂ ಆಸ್ಪತ್ರೆಯಲ್ಲಿರುವ ಎಪಿಡಿ ಪುನಶ್ಚೇತನ ಕೇಂದ್ರಕ್ಕೆ ಭೇಟಿ ನೀಡಿ 7 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರೊಂದಿಗೆ ಸಂವಹನ ನಡೆಸಿದರು.

# ಗಿಫ್ಟ್ ಏಬಲ್ಡ್ ವತಿಯಿಂದ 5 ರ್‍ಯಾಂಪ್ ನಿರ್ಮಾಣಕ್ಕೆ ಧನಸಹಾಯ





ಬೆಂಗಳೂರು ಗಿಫ್ಟ್ ಏಬಲ್ಡ್ ವತಿಯಿಂದ 35 ಅರ್ಹ ಫಲಾನುಭವಿಗಳಿಗೆ ಸ್ವ ಉದ್ಯೋಗಕ್ಕಾಗಿ ಜೇನು ಕೃಷಿಯನ್ನು ನೀಡಿದ್ದು, ಅದರ ನಿರ್ವಹಣೆ ಮನೆಯಿಂದ ಹೊರಬರಲು ಅನುಕೂಲವಾಗುವಂತೆ ಒಟ್ಟು 5 ಫಲಾನುಭವಿಗಳಿಗೆ ರೂ. 25000 ವೆಚ್ಚದ ರ್‍ಯಾಂಪ್ ನಿರ್ಮಾಣಕ್ಕೆ ಧನಸಹಾಯ ಮಾಡಿದ್ದು, ನಿರ್ಮಾಣವೂ ಪೂರ್ಣಗೊಂಡಿರುತ್ತದೆ.

*Know me for my abilities, not my disability*

## ಬೆನ್ನುಹುರಿ ಅಪಘಾತದ ಬಗ್ಗೆ ಮಾಹಿತಿ ಕಾರ್ಯಗಾರ



**ನೆಲ್ಯಾಡಿ :** ಸೇವಾಭಾರತಿ ಸೇವಾಧಾಮದ ವತಿಯಿಂದ ಬೆಥನಿ ಐಟಿಐ ಕಾಲೇಜಿನ ವಿದ್ಯಾರ್ಥಿಗಳಿಗೆ ಬೆನ್ನುಹುರಿ ಅಪಘಾತದ ಬಗ್ಗೆ ಮಾಹಿತಿ ಕಾರ್ಯಗಾರವನ್ನು ಫೆಬ್ರವರಿ 27 ರಂದು ಆಯೋಜಿಸಲಾಯಿತು.

ಸೇವಾಭಾರತಿ ದಕ್ಷಿಣಕನ್ನಡ ಜಿಲ್ಲೆಯ ಹಿರಿಯ ಕ್ಷೇತ್ರಸಯೋಂಜಕರಾದ ಅಖಿಲೇಶ್ ಮತ್ತು ಪೀರ್‌ಟ್ರೈನರ್ ಮೋಹನ್ ಕೆ. ಅವರು ಬೆನ್ನುಹುರಿ ಅಪಘಾತ ಮತ್ತು ನಿರ್ವಹಣಾ ಕ್ರಮದ ಬಗ್ಗೆ ಮಾಹಿತಿಯಿತ್ತರು. ಈ ಸಂಧರ್ಭದಲ್ಲಿ ಬೆಥನಿ ಐಟಿಐ ಕಾಲೇಜಿನ ಪ್ರಾಂಶುಪಾಲರಾದ ಟಿ.ಪಿ.ತೊಮಸ್, ಸೀನಿಯರ್ ಚೇಂಬರ್ ಇಂಟರ್‌ನ್ಯಾಷನಲ್‌ನ ಅಧ್ಯಕ್ಷರಾದ ಆರ್.ವೆಂಕಟರಮಣ, ಜೆಸಿಐ ನೆಲ್ಯಾಡಿಯ ಅಧ್ಯಕ್ಷರಾದ ದಯಾಕರ ರೈ ಉಪಸ್ಥಿತರಿದ್ದರು. ಹಾಗೂ ಕಾಲೇಜಿನ ಅಧ್ಯಾಪಕವೃಂದ ಮಾಹಿತಿ ಕಾರ್ಯಾಗಾರಕ್ಕೆ ಸಹಕಾರ ನೀಡಿದರು.

ಒಟ್ಟು 160 ವಿದ್ಯಾರ್ಥಿಗಳು ಕಾರ್ಯಗಾರದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ತರಬೇತಿ ಅಧಿಕಾರಿಯಾದ ಜೋನ್ ಟಿ.ಎಸ್. ನಿರೂಪಿಸಿ ಸ್ವಾಗತ ಹಾಗೂ ಧನ್ಯವಾದವಿತ್ತರು.


## ಫೆಬ್ರವರಿ ತಿಂಗಳ ಸೇವಾ ಕಾರ್ಯಗಳು

| | |
|---|---|
| ಗಾಲಿಕುರ್ಚಿ ವಿತರಣೆ | – 6 |
| ವಾಕರ್ ವಿತರಣೆ | – 1 |
| ಕಾಲಿಫರ್ ವಿತರಣೆ | – 3 |
| ಜೀವನೋಪಾಯ ಸೌಲಭ್ಯ | – 1 |
| ಮೆಡಿಕಲ್ ಸಪೋರ್ಟ್ | – 4 |
| ಸೆಲ್ಫ್‌ಕೇರ್ ಕಿಟ್ | – 5 |

## ಸೇವಾ ಸಂಗಮ

## ಆನ್‌ಲೈನ್ ಕಾರ್ಯಗಾರ




ಫೆಬ್ರವರಿ ತಿಂಗಳ ಸೇವಾಸಂಗಮ ಆನ್‌ಲೈನ್ ಮಾಹಿತಿಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಎಪಿಡಿ ಬೆಂಗಳೂರಿನ ಡೆಪ್ಯೂಟಿ ಡೈರೆಕ್ಟರ್ ಆದ ಶ್ರೀ ಎಸ್.ಬಾಬು ಅವರು ಆರೋಗ್ಯ, ಜೀವನೋಪಾಯ ಮತ್ತು ಇತರ ಸೌಲಭ್ಯಗಳ ಬಗ್ಗೆ ಬೆನ್ನುಹುರಿ ದಿವ್ಯಾಂಗರಿಗೆ ಮಾಹಿತಿಯಿತ್ತರು. ಕಾರ್ಯಗಾರದಲ್ಲಿ ಒಟ್ಟು 86 ಜನ ಭಾಗವಹಿಸಿದ್ದರು.

*The world worries about disability more than disabled people do*

# ಹೊಸ ಹೆಜ್ಜೆ, ಹೊಸ ಪ್ರಯತ್ನ ಪ್ಯಾರಾ ಸ್ಪೋರ್ಟ್ಸ್



## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು**: ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಮೆಡಿಕಲ್ ಕಿಟ್‌ಗಳು.

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ದಿನದ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

### Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**

# ಜೀವನ ಪಯಣ ಕಠಿಣವಾದಾಗ ನೆರವಿಗೆ ಬಂದ ದೂರ ಶಿಕ್ಷಣ

## ಬಾಲ್ಯದಲ್ಲೇ ಬೆನ್ನುಹುರಿ ಅಪಘಾತಕ್ಕೊಳಗಾದ ನಿತೇಶ್ ನಾಯ್ಕ್ | ಜೀವನಸ್ಫೂರ್ತಿ ಕಥೆ



**5ನೇ ವಯಸ್ಸಿನಲ್ಲಿ ಸಂಭವಿಸಿದ ದುರ್ಘಟನೆಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ನಿತೇಶ್ ನಾಯ್ಕ್ ವಿಕಲತೆಯ ನಡುವೆಯೇ ಪದವಿ ಪೂರ್ವ ಶಿಕ್ಷಣ ಮಾಡಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿರುವುದು ಅವರ ಮನಃಶಕ್ತಿಗೆ ಹಿಡಿದ ಕೈಗನ್ನಡಿ.**

ಪ್ರತಿಯೊಬ್ಬ ಮನುಷ್ಯನ ಜೀವನದಲ್ಲೂ ಬಾಲ್ಯಾವಸ್ಥೆ ಎಂಬುದು ಅತ್ಯಂತ ಅಮೂಲ್ಯವಾದ ಘಟ್ಟ. ಆದರೆ ತಮ್ಮ 5 ನೇ ವರ್ಷದಲ್ಲಿ ಸಂಭವಿಸಿದ ಒಂದು ದುರ್ಘಟನೆಯಿಂದಾಗಿ ಬೆನ್ನುಹುರಿ ಅಪಘಾತಕ್ಕೊಳಗಾದರು.

ನಿತೇಶ್ ನಾಯ್ಕ್ ಅವರು 1993 ಮೇ 7 ರಂದು ಕುಂದಾಪುರದ ತೆಕ್ಕಟ್ಟೆಯಲ್ಲಿ ಜನಿಸಿದರು. ತಮ್ಮ 5ನೇ ವಯಸ್ಸಿನಲ್ಲಿ ಕುಟುಂಬದ ಮದುವೆ ಸಮಾರಂಭಕ್ಕೆ ತೆರಳುತ್ತಿದ್ದಾಗ ತಾವು ಸಂಚರಿಸುತ್ತಿದ್ದ ಜೀಪು ಅಪಘಾತಕ್ಕೊಳಗಾಗಿ ಬೆನ್ನುಹುರಿ ಆಘಾತಕ್ಕೆ ತುತ್ತದಾರು. ಮಂಗಳೂರಿನ ಕೆ.ಎಂ.ಸಿ. ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಾದರೂ ತನಗೆ ಏನಾಗಿದೆ ಎಂದು ಅರಿಯದ ವಯಸ್ಸದು. ಆದರೆ ಕುಟುಂಬದ ಬೆಂಬಲದಿಂದಾಗಿ ತಮ್ಮ ಬಾಲ್ಯದ ಜೀವನವನ್ನು ಯಾವುದೇ ಇತರ ಸಮಸ್ಯೆಯಿಲ್ಲದೆ ಕಳೆಯುತ್ತಾರೆ.

ಆರ್ಥಿಕ ಪರಿಸ್ಥಿತಿಯ ದುರ್ಬಲದಿಂದಾಗಿ ತಮ್ಮ ಶಿಕ್ಷಣ ಮುಂದುವರೆಸಲು ವಿಫಲವಾಗುತ್ತಾರೆ. ಆದರೂ ಪ್ರಯತ್ನ ಬಿಡದೆ ಮನಸಿದ್ದರೆ ಮಾರ್ಗ ಎನ್ನುವ ನಾಣ್ಣುಡಿಯಂತೆ ದೂರ ಶಿಕ್ಷಣದ ಮೂಲಕ 2017 ರಲ್ಲಿ ತಮ್ಮ ಹತ್ತನೇ ತರಗತಿ ಪೂರ್ಣಗೊಳಿಸಿ 2019 ರಲ್ಲಿ ವಾಣಿಜ್ಯ ವಿಭಾಗದಲ್ಲಿ ಪದವಿ ಪೂರ್ವ ಶಿಕ್ಷಣವನ್ನು ಪೂರ್ಣಗೊಳಿಸುತ್ತಾರೆ.

ಮುಂದೆ ಸ್ವತಂತ್ರವಾಗಿ ತಮ್ಮ ಜೀವನ ನಡೆಸಬೇಕೆಂಬ ದೃಷ್ಟಿಕೋನದಲ್ಲಿ ಷೇರು ಮಾರುಕಟ್ಟೆಯಲ್ಲಿ ಹೂಡಿಕೆಯಿಟ್ಟು ವ್ಯವಹಾರ ನಡೆಸಲು ಪ್ರಾರಂಭಿಸುತ್ತಾರೆ. ತದನಂತರ ತಮ್ಮ ನಿವಾಸ ಸಮೀಪದ ಕಚೇರಿಯೊಂದರಲ್ಲಿ ಅಕೌಂಟೆಂಟ್ ಆಗಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿ ಸ್ಫೂರ್ತಿದಾಯಕ ಜೀವನ ನಡೆಸುತ್ತಿದ್ದಾರೆ.

ನಿತೇಶ್ ನಾಯ್ಕ್ ಅವರಿಗೆ ಅಪಘಾತವಾದ 24 ವರ್ಷದ ನಂತರ ಅಂದರೆ 2021ರಲ್ಲಿ ಕುಂದಾಪುರದ ವಿ.ಆರ್.ಡಬ್ಲ್ಯೂ (ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು) ಮುಖಾಂತರ ಸೇವಾಭಾರತಿಯ ಬಗ್ಗೆ ತಿಳಿದು ಸಂಸ್ಥೆಯಿಂದ ಗಾಲಿಕುರ್ಚಿಯನ್ನು ಪಡೆದಿರುತ್ತಾರೆ. ಮನಸ್ಸೊಂದಿದ್ದರೆ ಪರಿಸ್ಥಿತಿ ಎಂತಹದೇ ಇರಲಿ ಗುರಿ ನಮ್ಮದಾಗಿರುತ್ತದೆ ಎಂಬುದಕ್ಕೆ ಈ ಸಾಲಿನ ಯಶೋಗಾಥೆ ನಿಮ್ಮ ಮುಂದಿಡುತ್ತಿದ್ದೇವೆ.

*Life would be tragic if it weren't funny*